

ನೀವು ನಡೆಸುತ್ತಿರುವ ಶೀತಲ ಸಮರವನ್ನೇಕೆ ನಿಲ್ಲಿಸಬಾರದು?' ಎಂದು ನೇರವಾಗಿ ಪ್ರಶ್ನಿಸಿದರು. ಆಗ ಸ್ಟಾಲಿನ್, 'ನಾನೊಬ್ಬನೇ ಎಲ್ಲಿ ಯುದ್ಧ ಮಾಡುತ್ತಿದ್ದೇನೆ? ಎರಡು ಕೈ ಸೇರಿದರೆ ಚಪ್ಪಾಳೆ ಅಲ್ಲವೇ? ನನ್ನದು ಒಂದು ಕೈ ಮಾತ್ರ, ಇನ್ನೊಂದು ಕೈ ಅವರದಲ್ಲವೇ?' ಎಂದು ಮರುಪ್ರಶ್ನೆ ಹಾಕಿ, ತತ್ವಜ್ಞಾನಿಯನ್ನು ಮಾತಿನಲ್ಲಿ ಕಟ್ಟಿಹಾಕಿದೆ ಎಂಬ ಉಮೇದಿನಲ್ಲಿ ಗೆದ್ದವರಂತೆ ಗಂಭೀರವಾಗಿ ಕುಳಿತುಕೊಂಡರು.

'ನೀವೇ ಹೇಳಿದಂತೆ ಚಪ್ಪಾಳೆಗೆ ಎರಡು ಕೈ ಬೇಕು. ಅವರ ಕೈ ಇದ್ದರೆ ಇರಲಿ, ನಿಮ್ಮ ಕೈಯನ್ನು ಹಿಂದೆ ತೆಗೆದುಕೊಂಡುಬಿಡಿ. ಆಗ ಅವರೂ ಹಿಂದೆ ಸರಿಯುತ್ತಾರೆ. ಆಗ ಯಾವ ಚಪ್ಪಾಳೆಯ ಸದ್ದೂ ಇರುವುದಿಲ್ಲ' ಎಂದು ರಾಧಾಕೃಷ್ಣನ್ ಹೇಳಿದಾಗ ಸ್ಟಾಲಿನ್ ಕಕ್ಕಾಬಿಕ್ಕಿ ಆಗಿದ್ದರು. ಭಾರತದ ತತ್ವಜ್ಞಾನಿಯ ಮಾತುಗಳನ್ನು ಅತೀವವಾಗಿ ಮೆಚ್ಚಿಕೊಂಡ ಸ್ಟಾಲಿನ್ ಮತ್ತು ಸೋವಿಯತ್ ಯೂನಿಯನ್, ಮುಂದಿನ ದಿನಗಳಲ್ಲಿ ಸದಾ ಭಾರತದ ಪರವಾಗಿ ನಿಂತು, ವಿಶ್ವಸಂಸ್ಥೆಯ ಸಭೆಗಳಲ್ಲಿ ಕಾಶ್ಮೀರದ ವಿಷಯದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದ ಅಮೆರಿಕ ಮತ್ತು ಇಂಗ್ಲೆಂಡ್‌ಗಳನ್ನು ನೇರವಾಗಿ ತರಾಟೆಗೆ ತೆಗೆದುಕೊಂಡಿತ್ತು.

## 5. ನೊಬೆಲ್‌ಗೆ ಐದು ಬಾರಿ ನಾಮಕರಣ

ತತ್ವಜ್ಞಾನದಲ್ಲಿ ವಿಶೇಷ ಪರಿಣತಿ ಹೊಂದಿದ ರಾಧಾಕೃಷ್ಣನ್, 1920ರಲ್ಲಿ ಕಲ್ಕತ್ತಾ ಯುನಿವರ್ಸಿಟಿಯ ಆಹ್ವಾನದ ಮೇರೆಗೆ ಅಲ್ಲಿ ತತ್ವಜ್ಞಾನ ಅಧ್ಯಾಪಕರಾಗಿ ಕೆಲಸ ನಿರ್ವಹಿಸಿದರು. ಅಲ್ಲಿದ್ದಷ್ಟು ದಿನ ಕವಿ ರವೀಂದ್ರನಾಥ ಟ್ಯಾಗೋರ್ ಅವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ರಾಧಾಕೃಷ್ಣನ್ ಅವರು ತತ್ವಜ್ಞಾನದ ತಮ್ಮ ಪ್ರಥಮ ಪುಸ್ತಕವನ್ನು ಟ್ಯಾಗೋರರ ತತ್ವಜ್ಞಾನದ ಮೇಲೆಯೇ ರಚಿಸಿದ್ದರು.

ಮ್ಯಾಂಚೆಸ್ಟರ್, ಚಿಕಾಗೋದ ಪ್ರತಿಷ್ಠಿತ ಕಾಲೇಜುಗಳು ಮತ್ತು ಆಕ್ಸ್‌ಫರ್ಡ್ ಯುನಿವರ್ಸಿಟಿ, ರಾಧಾಕೃಷ್ಣನ್‌ರನ್ನು ಆಹ್ವಾನಿಸಿ, ಅವರ ಪಾಂಡಿತ್ಯಪೂರ್ಣ ಉಪನ್ಯಾಸಗಳಿಗೆ ಕಿವಿಯಾಗಿದ್ದವು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಮೂರು ವರ್ಷಗಳ ಕಾಲ ತತ್ವಜ್ಞಾನ ಪಾಠ ಮಾಡಿದ ರಾಧಾಕೃಷ್ಣನ್, ಪೂರ್ವದೇಶಗಳ ಧರ್ಮ ಮತ್ತು ನೀತಿಗಳ ಕುರಿತಾದ ಅಧ್ಯಯನಪೀಠದ ಮುಖ್ಯಸ್ಥರಾಗಿಯೂ 16 ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಅಲ್ಲಿಂದ ಭಾರತಕ್ಕೆ ಹಿಂದಿರುಗಿದ ಮೇಲೆ 'ದ ರಿಲಿಜನ್ ವಿ ನೀಡ್', 'ಹಾರ್ಟ್ ಆಫ್ ಹಿಂದುಸ್ತಾನ್' ಮತ್ತು 'ದ ಫ್ಯೂಚರ್ ಆಫ್ ಸಿವಿಲೈಜೇಷನ್' ಎಂಬ ಶ್ರೇಷ್ಠ ಕೃತಿಗಳನ್ನು ರಚಿಸಿದರು. 1933–37 ರ ಅವಧಿಯಲ್ಲಿ ಸಾಹಿತ್ಯಕ್ಕಾಗಿ ಐದು ಬಾರಿ ನೊಬೆಲ್ ಬಹುಮಾನಕ್ಕೆ ನಾಮಕರಣಗೊಂಡಿದ್ದರು. ಬಹುಮಾನ ಬರಲಿಲ್ಲವಾದರೂ ದೊರೆ 5ನೇ ಜಾರ್ಜ್ 'ನೈಟ್ ಹುಡ್' ಪದವಿ ನೀಡಿ ರಾಧಾಕೃಷ್ಣನ್ ಅವರನ್ನು ಗೌರವಿಸಿದರು.

ಬ್ರಿಟಿಷ್ ಸರ್ಕಾರ ಗೌರವಪೂರ್ವಕವಾಗಿ ನೀಡುತ್ತಿದ್ದ ರಾಯಲ್ ಆರ್ಡರ್ ಮೆರಿಟ್ ಗೌರವ (1963) ಮತ್ತು ಟೆಂಪಲ್ಟನ್ (1975) ಬಹುಮಾನಕ್ಕೂ ರಾಧಾಕೃಷ್ಣನ್ ಪಾತ್ರರಾದರು. ಟೆಂಪಲ್ಟನ್ ಬಹುಮಾನದ ಫಲವಾಗಿ ಬಂದ ಹಣವನ್ನು ಆಕ್ಸ್‌ಫರ್ಡ್ ವಿವಿಗೆ ದೇಣಿಗೆ ನೀಡಿ, 'ಪಡೆಯುವುದಕ್ಕಿಂತ ಕೊಡುವುದರಲ್ಲಿ ಸಂತೋಷವಿದೆ' ಎಂದಿದ್ದರು.



## 6. ರಥಕ್ಕೆ ಕುದುರೆಗಳಾದ ವಿದ್ಯಾರ್ಥಿಗಳು!

ಭಾರತದ ರಾಷ್ಟ್ರಪತಿ ಆಗುವುದಕ್ಕೂ ಮುನ್ನ ಡಾಕ್ಟರ್ ರಾಧಾಕೃಷ್ಣನ್ ನಮ್ಮ ರಾಜ್ಯದ ಮೈಸೂರು ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳಿಗೆ ತತ್ವಜ್ಞಾನದ ಪಾಠಮಾಡುವ ಪ್ರೊಫೆಸರ್ ಆಗಿದ್ದರು. ಹೆಚ್ಚಿನ ಜವಾಬ್ದಾರಿಗಾಗಿ ಇಲ್ಲಿನ ಕೆಲಸ ಬಿಟ್ಟು ಕಲ್ಕತ್ತಾ ಯುನಿವರ್ಸಿಟಿಗೆ ಹೋಗುವಾಗ, ವಿದ್ಯಾರ್ಥಿಗಳು ಅವರಿಗೊಂದು ಬೀಳ್ಕೊಡುಗೆ ಸಮಾರಂಭ ಏರ್ಪಾಟು ಮಾಡಿದ್ದರು. ಸಮಾರಂಭದುದ್ದಕ್ಕೂ ಅವರ ಶಿಷ್ಯರು ಗುರುವಿನ ಗುಣಗಾನ ಮಾಡಿದ್ದಲ್ಲದೆ, ಅವರನ್ನು ರೈಲ್ವೆ ನಿಲ್ದಾಣಕ್ಕೆ ಕರೆದೊಯ್ಯಲು ಸಿಂಗರಿಸಿದ ರಥವನ್ನು ಸಿದ್ಧ ಮಾಡಿದ್ದರು. ರಥ ಎಳೆಯುವ ಕುದುರೆಗಳನ್ನು ಮಾತ್ರ ನೊಗಕ್ಕೆ ಕಟ್ಟಿರಲಿಲ್ಲ. ವಿದ್ಯಾರ್ಥಿಗಳ ಮನವಿ ಸ್ವೀಕರಿಸಿದ ರಾಧಾಕೃಷ್ಣನ್ ರಥವನ್ನೇರಿ ಕುಳಿತು 'ಕುದುರೆಗಳೆಲ್ಲಿ?' ಎಂದರು. ಕೂಡಲೇ ಕುದುರೆಗಳ ಜಾಗಕ್ಕೆ ಬಂದು ನಿಂತ ವಿದ್ಯಾರ್ಥಿಗಳು ರಥವನ್ನು ಮೈಸೂರಿನ ರೈಲ್ವೆ ನಿಲ್ದಾಣದವರೆಗೂ ಎಳೆದುಕೊಂಡೇ ನಡೆದರು! ಗುರುವಿಗಾಗಿ ಇಂಥ ಅಪರೂಪದ ಸೇವೆಮಾಡಿದ ಕರ್ನಾಟಕದ ವಿದ್ಯಾರ್ಥಿಗಳು ಜ್ಞಾನ ನೀಡಿದ ಗುರುವನ್ನು ಹೇಗೆ ಗೌರವಿಸಬಹುದು ಎಂಬುದನ್ನು ಅಭೂತಪೂರ್ವವಾಗಿ ನಿರೂಪಿಸಿದ್ದರು.

## 7. ಅಧ್ಯಕ್ಷಗಿರಿ ಸ್ವಾಗತಿಸಿದ ರಸೆಲ್

ಭಾರತದ ತತ್ವಜ್ಞಾನವನ್ನು ಪಶ್ಚಿಮದ ಜಗತ್ತಿಗೆ ಪರಿಚಯಿಸಿದ ರಾಧಾಕೃಷ್ಣನ್ ಅವರನ್ನು ಭಾರತದ ರಾಷ್ಟ್ರಪತಿಯನ್ನಾಗಿ ನೇಮಿಸಿದಾಗ ಅತ್ಯಂತ ಖುಷಿ ಪಟ್ಟವರು ಜಗತ್ತಿನ ಖ್ಯಾತ ತತ್ವಜ್ಞಾನಿ ಬರ್ಟ್ರಂಡ್ ರಸೆಲ್. 'ಭಾರತ ದೇಶ ತತ್ವಜ್ಞಾನಿಯೊಬ್ಬರಿಗೆ ದೇಶದ ಅತ್ಯುನ್ನತ ಹುದ್ದೆ ನೀಡಿ ಗೌರವಿಸುತ್ತಿರುವುದು ನನಗೆ ಅಪಾರ ಸಂತೋಷ ತಂದಿದೆ. ಇದು ತತ್ವಜ್ಞಾನ ಲೋಕಕ್ಕೆ ಸಂದ ಗೌರವ ಎಂದು ಭಾವಿಸುತ್ತೇನೆ' ಎಂದಿದ್ದರು.

'ಆದರ್ಶ ರಾಜ್ಯದ ಮಾತನಾಡುತ್ತಿದ್ದ ಪ್ಲೇಟೊ, ತತ್ವಜ್ಞಾನಿಗಳು ರಾಜರಾದರೆ ದೇಶಗಳು ಸುಭಿಕ್ಷವಾಗಿರುತ್ತವೆ ಎಂದಿದ್ದನ್ನು ಮೆಲುಕು ಹಾಕುವಂತೆ ಮಾಡಿದ ಭಾರತದ ಆಡಳಿತಕ್ಕೆ ನಾನು ಧನ್ಯವಾದ ಹೇಳಬಯಸುತ್ತೇನೆ' ಎಂದೂ ರಸೆಲ್ ಹೇಳಿದ್ದರು.

ಅಧ್ಯಕ್ಷರಾಗಿದ್ದ ಐದು ವರ್ಷಗಳ ಅವಧಿಯಲ್ಲಿ ರಾಧಾಕೃಷ್ಣನ್ ತಮಗೆ ಬರುತ್ತಿದ್ದ 10,000 ರೂಪಾಯಿ ಸಂಬಳದಲ್ಲಿ, ಕೇವಲ ಎರಡೂವರೆ ಸಾವಿರ ರೂಪಾಯಿಗಳನ್ನು ಮಾತ್ರ ತೆಗೆದುಕೊಳ್ಳುತ್ತಿದ್ದರು. ಉಳಿದುದನ್ನು 'ಪ್ರಧಾನಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿ'ಗೆ ನೀಡುತ್ತಿದ್ದರು.

ಪ್ರತಿಕ್ರಿಯಿಸಿ: feedback@sudha.co.in